ಆ) ತಾಲ್ಲೂಕಿನಲ್ಲಿ ೨ ಇವೆ ಮತ್ತು ಜಿಲ್ಲೆಯಲ್ಲಿ ೧೭ ಇವೆ.

ಇ) ೩ ಕೇಂದ್ರಗಳಿಗೆ ಜಿಲ್ಲಾಪರಿಷತ್ತಿನಿಂದ ಪ್ರಸ್ತಾವನೆ ಬಂದಿದ್ದು ೧೯೯೨-೯೩ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು

ಈ) ೧೯೯೨-೯೩ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಬಿ. ಬಸವಲಿಂಗಪ್ಪ (ಪರಿಸರ ಮತ್ತು ತಂತ್ರಜ್ಞಾನ ಖಾತೆ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ ೧೮.೩.೯೨ನೇ ತಾರೀಖಿನಂದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ೧೮ನೇ ಪಟ್ಟಿಯಲ್ಲಿರುವ ೪೦ ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ ೬೯೦, ೧೨೬೬, ೧೩೩೬, ೧೬೩೮, ೧೬೪೦, ೧೯೨೩, ೨೦೦೪, ೧೮೨೫, ೧೯೭೭, ೧೯೮೧ ಮತ್ತು ೧೩೭೦ ಈ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ ೨೯ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

### ಬೆಳಗಾವಿ ಜಿಲ್ಲೆಯಲ್ಲಿ ದತ್ತಿ ಕಮಿಷನರ್ ಇಲ್ಲದೆ ತೊಂದರೆ.

೧೨೮೬(೨೧೪೭) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಧಾರ್ಮಿಕ ದತ್ತಿ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಬೆಳಗಾವಿ ಜಿಲ್ಲೆಯಲ್ಲಿ ದತ್ತಿ ಕಮಿಷನರು ಇಲ್ಲದೆ ಇರುವುದರಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ದತ್ತಿ ಕಮಿಷನರ್‌ರವರನ್ನು ನೇಮಕ ಮಾಡಲಾಗುವುದು;

ಇ) ಈಗ ಎಂದಿನಿಂದ ಈ ಹುದ್ದೆ ಖಾಲಿ ಇರುವುದು ಮತ್ತು ಈಗ ದತ್ತಿ ಕಮಿಷನರ್ ಇಲ್ಲದೇ ಇರುವಾಗ ಅವರ ಕೆಲಸವನ್ನು ಯಾರು ಮಾಡುತ್ತಿರುವರು;

ಈ) ಪ್ರಭಾರ ದತ್ತಿ ಕಮೀಷನರ್‌ಗೆ ಚೆಕ್ ಸಹಿ ಮಾಡುವ ಅಧಿಕಾರ ಇಲ್ಲದೇ ಇರುವುದರಿಂದ ಜನರಿಗೆ ಹಣವನ್ನು ಬಿಡುಗಡೆ ಮಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):-

ಅ) ಹೌದು.

ಆ) ಜಿಲ್ಲಾ ನ್ಯಾಯಾಧೀಶರ ಕೇಡರ್ ಇರುವವರನ್ನು ಮಾತ್ರ ಬಿ. ಪಿ. ಟಿ. ಕಾಯ್ದೆಯ ಅನ್ವಯ ಚಾರಿಟೀ ಕಮೀಷನರ್ ಆಗಿ ನೇಮಿಸಬೇಕಿರುತ್ತದೆ. ಆದರಂತೆ ರಾಜ್ಯ ಉಚ್ಚ ನ್ಯಾಯಾಲಯದವರು ಒಬ್ಬ ಜಿಲ್ಲಾನ್ಯಾಯಾಧೀಶರ ಸೇವೆಯನ್ನು ರಾಜ್ಯ ಸರ್ಕಾರಕ್ಕೆ ನಿಯೋಜನೆ ಮೇರೆ ಬಿಟ್ಟು ಕೊಟ್ಟ ನಂತರ ಸರ್ಕಾರವು ಪುನಃ ಅದನ್ನು ಸದರಿ ಕಾಯ್ದೆ ಸೆಕ್ಷನ್ ೩ರ ಪ್ರಕಾರ ಚಾರಿಟಿ ಕಮೀಷನರ್ ಎಂದು ನೇಮಕ ಮಾಡುತ್ತದೆ.

ಇ) ದಿನಾಂಕ ೧-೭-೧೯೯೧ರಿಂದ ಖಾಲಿ ಇರುತ್ತದೆ. ಸಹಾಯಕ ಚಾರಿಟಿ ಕಮೀಷನರ್

ಅವರು ಪ್ರಭಾರದಲ್ಲಿದ್ದು ಬಿ. ಪಿ. ಟಿ. ಕಾಯ್ದೆ ಅನ್ವಯ ಬರುವ ಮೆಲ್ಮನವಿ, ರಿವಿಜನ್ ಹಾಗೂ ಇತರ ನ್ಯಾಯಾಂಗ ವಿಚಾರಣ ಹೊರತುಪಡಿಸಿ ದಿನ ನಿತ್ಯದ ಆಡಳಿತ, ಕಛೇರಿ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಈ) ಹೌದು. ಜನರ ಹಿತದೃಷ್ಠಿಯಿಂದ ಸಹಾಯಕ ಚಾರೀಟಿ ಕಮೀಷನರ್ ಅವರಿಗೆ ಚೆಕ್ ಸಹಿ ಮಾಡುವ ಅಧಿಕಾರವನ್ನು ನೀಡಲಾಗಿದೆ. ದಿನಾಂಕ ೮-೧-೯೨ರಿಂದ ಚೆಕ್‌ಗಳಿಗೆ ಸಹಿ ಮಾಡುತ್ತಿದ್ದಾರೆ.

## ಗದ್ದಿ ಗೌಡರ ಸಮಿತಿ ಪ್ರಕಾರ ಕಿತ್ತೂರು ತಾಲ್ಲೂಕ ಕೇಂದ್ರವನ್ನಾಗಿ ಮಾಡುವ ಬಗ್ಗೆ.

೧೨೮೭(೨೧೪೮)ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಗದ್ದಿ ಗೌಡರ ಸಮಿತಿ ಪ್ರಕಾರ ಬೆಳಗಾವಿ ಜಿಲ್ಲೆಯ ಕಿತ್ತೂರ ಗ್ರಾಮವನ್ನು ತಾಲ್ಲೂಕ ಕೇಂದ್ರವನ್ನಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಕಿತ್ತೂರನ್ನು ತಾಲ್ಲೂಕ ಕೇಂದ್ರವನ್ನಾಗಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಸರ್ಕಾರವು ಗದ್ದಿ ಗೌಡರ ಸಮಿತಿ ಶಿಫಾರಸ್ಸನ್ನು ಒಪ್ಪಿಕೊಂಡಿದೆಯೇ ಮತ್ತು ಈ ಸಮಿತಿ ಸಲಹೆಗಳನ್ನು ಜಾರಿಗೆ ತರಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಕಿತ್ತೂರನ್ನು ತಾಲ್ಲೂಕವಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಿರುವುದು ನಿಜ.

ಆ) ಪರಿಶೀಲಿಸಿ ಅಗತ್ಯವೆಂದು ಕಂಡುಬಂದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಕೂಲಂಕುಷ ಪರಿಶೀಲನೆಯ ನಂತರ.

## ರಾಜ್ಯದಲ್ಲಿರುವ ಗ್ರಾಮ ಲೆಕ್ಕಿಗರ ಕೊರತೆ

೧೨೮೮(೧೬೪೬)ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದಲ್ಲಿರುವ ಗ್ರಾಮಲೆಕ್ಕಿಗರ ಕೊರತೆ ಎಷ್ಟು;

ಆ) ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೨೦೩೪

ಆ) ೭೮